(ಕಂದಾಯ ಇಲಾಖೆ)

ಉಪತಹಶೀಲ್ದಾರರ ಕಾರ್ಯಾಲಯ, ಮರಿಯಮ್ಮನಹಳ್ಳಿ ಇವರ ನ್ಯಾಯಾಲಯದಲ್ಲಿ

| ವಾದಿ | ಪ್ರತಿವಾದಿ |
|---|---|
| ಶ್ರೀ ಗುತ್ತೂರು ಪಂಪಾಪತಿ ತಂದೆ ನಾಗಪ್ಪ, ಲೋಕಪ್ಪನಹೊಲ ಗ್ರಾಮ, ಹಗರಿಬೊಮ್ಮನಹಳ್ಳಿ | ಶ್ರೀ ಓಕಾರೇಶ್ವರ ತಂದೆ ನಿಂಗಪ್ಪ, ತಿಮ್ಮಲಾಪುರ ಗ್ರಾಮ ಹೊಸಪೇಟೆ ತಾಲೂಕು |

*******

ಪೀಠಿಕೆ:-

ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿಯ ತೆಲಗುಬಾಳು ಗ್ರಾಮದ ಸ.ನಂ. 29/3 ವಿಸ್ತೀರ್ಣ 2.72 ಎಕರೆ ಜಮೀನನ್ನು ಶ್ರೀ ಗುತ್ತೂರು ಪಂಪಾಪತಿ, ತಂದೆ ನಾಗಪ್ಪ, ಲೋಕಪ್ಪನಹೊಲ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು ಇವರು ದಸ್ತಾವೇಜು ಸಂಖ್ಯೆ 5312/2015-16 ದಿನಾಂಕ 18-12-2015 ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ದಿನಾಂಕ 22-12-2015 ರಂದು ನಮೂನೆ-21ನ್ನು ಮುದ್ರಿಸಿ ಗ್ರಾಮಲೆಕ್ಕಗರು ತೆಲುಗುಬಾಳು ಇವರಿಗೆ ಜಾರಿ ಮಾಡಲು ನೀಡಿದ್ದು, ದಿನಾಂಕ 22-12-2015 ರಂದು ಸಂಬಂಧಪಟ್ಟವರಿಗೆ ಜಾರಿ ಮಾಡಿ ಗ್ರಾಮದಲ್ಲಿ ಪ್ರಚುರಪಡಿಸಿದ ನಮೂನೆ-21 ರಲ್ಲಿ ನಿಗಧಿತ ಅವಧಿಯೊಳಗೆ ಶ್ರೀ ಓಂಕಾರೇಶ ತಂದೆ ನಿಂಗಪ್ಪ, ತಿಮ್ಮಲಾಪುರ ಗ್ರಾಮ ಇವರು ದಿನಾಂಕ 30-12-2015 ರಂದು ತಕರಾರು ಅರ್ಜಿ ಸಲ್ಲಿಸಿರುವುದಾಗಿ ಮತ್ತು ಸದರಿ ಜಮೀನು ಡಯಾಗ್ಲಾಟ್ ಪ್ರಕಾರ ಇನಾಂ ಜಮೀನಾಗಿರುವುದಾಗಿ ಗ್ರಾಮಲೆಕ್ಕಿಗರು ವರದಿ ನೀಡಿರುವುದರಿಂದ ಕಂದಾಯ ನಿರೀಕ್ಷಕರು ಸದರಿ ಪ್ರಕರಣವನ್ನು ವಿವಾದಸ್ಪದ ಮತ್ತು ಇನಾಂ ಪ್ರಕರಣವೆಂದು ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ನೈಸರ್ಗಿಕ ನ್ಯಾಯದ ಹಿತ ದೃಷ್ಟಿಯಿಂದ ಎರಡು ಪಕ್ಷದವರಿಗೆ ಅವಕಾಶ ನೀಡಿ, ಪ್ರಕರಣದ ವಿಚಾರಣೆಯನ್ನು ದಿನಾಂಕ 08-02-2016 ರಂದು ಪ್ರಾರಂಭಿಸಿ, ದಿನಾಂಕ 15-02-2016 ರಂದು ಮುಕ್ತಾಯಗೊಳಿಸಲಾಯಿತು. ಸದರಿ ವಿಚಾರಣೆಗೆ ವಾದಿಗಳು ಮತ್ತು ಪ್ರತಿವಾದಿಗಳು ದಾಖಲೆಗಳೊಂದಿಗೆ ಹಾಜರಾಗಿರುತ್ತಾರೆ.

ವಾದಿಯು ವಿಚಾರಣೆಗೆ ಹಾಜರಾಗಿ ವಾದವನ್ನು ಮಂಡಿಸುತ್ತಾ, ವಿವಾದಾಸ್ಪದ ಜಮೀನನ್ನು ಕ್ರಯಕ್ಕೆ ಪಡೆದಿದ್ದು, ಕ್ರಯ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ಮಾಡುವಂತೆ ಕೋರುತ್ತಾ, ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿ ವಾದವನ್ನು ಮಂಡಿಸುತ್ತಾ ವಿವಾದಾಸ್ಪದ ಜಮೀನನ್ನು ತಮ್ಮ ತಾಯಿಯಾದ ಶ್ರೀಮತಿ ಗೌಳೇರ ಲಿಂಗಮ್ಮ ಗಂಡ ನಿಂಗಪ್ಪ ರವರು ನಾನು ಊರಿನಲ್ಲಿ ಇಲ್ಲದ ಸಮಯದಲ್ಲಿ ಶ್ರೀ ಗುತ್ತೂರು ಪಂಪಾಪತಿ, ತಂದೆ ನಾಗಪ್ಪ, ಲೋಕಪ್ಪನಹೊಲ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು ಇವರಿಗೆ ಕ್ರಯಕ್ಕೆ ಕೊಟ್ಟು ಹಣ ಪಡೆದು ಕ್ರಯ ನೊಂದಣಿ ಮಾಡಿಸಿಕೊಟ್ಟಿರುತ್ತಾರೆ. ನಾನು ಊರಿಗೆ ಬಂದ ನಂತರ ಈ ವಿಷಯ ತಿಳಿದು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಆದರೆ ಈಗ ಸದ್ರಿ ವಿವಾದಾಸ್ಪದ ಜಮೀನಿಗೆ ಸಲ್ಲಿಸಿದ ತಕರಾರು ಅರ್ಜಿಯನ್ನು ವಾಪಸ್ಸು ಪಡೆಯುವುದಾಗಿ ವಾದಿಗಳ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇಲ್ಲವೆಂದು ಹೇಳಿಕೆ ನೀಡುತ್ತಾ, ವಾದಿಗಳ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಕೋರಿರುತ್ತಾರೆ.

TALUKA OFFICE, HOSPET.
07 APR 2016

2ನೇ ಪುಟಕ್ಕೆ. . . .

ವಾದಿ ಮತ್ತು ಪ್ರತಿವಾದಿಗಳು ಮಂಡಿಸಿದ ವಾದ ಮತ್ತು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1. ವಿವಾದಾಸ್ಪದ ಜಮೀನು ಇನಾಂ ಜಮೀನಾಗಿದ್ದು ಡಯಾಗ್ಲಾಟ್‌ನಿಂದ ಕಂಡುಬರುತ್ತದೆ.

2. ವಿವಾದಾಸ್ಪದ ಜಮೀನನ್ನು ಶ್ರೀಮತಿ ಗೌಳೇರ ಲಿಂಗಮ್ಮ ಗಂಡ ಜಿ.ನಿಂಗಪ್ಪ, ತಿಮ್ಮಲಾಪುರಗ್ರಾಮ ಇವರಿಂದ ವಾದಿಯಾದ ಶ್ರೀ ಗುತ್ತೂರು ಪಂಪಾಪತಿ ತಂದೆ ಗುತ್ತೂರು ನಾಗಪ್ಪ, ಲೋಕಪ್ಪನಹೊಲ ಗ್ರಾಮ, ಹಗರಿಬೊಮ್ಮನಹಳ್ಳಿ ತಾ|| ಇವರು ರೂ.2,48,000/-ಗಳಿಗೆ ಕ್ರಯ ದಸ್ತಾವೇಜು ಸಂಖ್ಯೆ 5312/2015-16 ದಿನಾಂಕ 18-12-2015 ರಂದು ಕ್ರಯಕ್ಕೆ ಪಡೆದಿರುವುದು ಕ್ರಯ ಪತ್ರದಿಂದ ಕಂಡುಬರುತ್ತದೆ.

3. ವಿವಾದಾಸ್ಪದ ಜಮೀನಿನ 1967-68 ನೇ ಸಾಲಿನ ಪಹಣಿ ಪತ್ರಿಕೆಯ ಕಾಲಂ 6 ರಲ್ಲಿ ಪರಸನಲ್ ಇನಾಂ ಎಂದು ಮತ್ತು 1981-82 ರಿಂದ 2000-01 ಪಹಣಿ ಪತ್ರಿಕೆಯ ಕಾಲಂ 6 ರಲ್ಲಿ ಪಟ್ಟಾ ಎಂದು ನಮೂದಿರುವುದು ಕಂಡು ಬರುತ್ತದೆ.

4. ವಿವಾದಾಸ್ಪದ ಜಮೀನಿನ 1981-82 ರಿಂದ 1990-91 ರ ವರೆಗಿನ ಕೈ ಬರಹ ಪಹಣಿ ಕಾಲಂ ನಂ.9 ರಲ್ಲಿ ಶ್ರೀ ಗೌಳೇರು ಮಹಾದೇವಪ್ಪ ತಂದೆ ಉಮ್ಮಣ್ಣ, ತಿಮ್ಮಲಾಪುರ ಎಂದು ಮತ್ತು 1996-97 ರಿಂದ 1997-98 ರ ವರೆಗಿನ ಕೈಬರಹ ಪಹಣಿ ಕಾಲಂ ನಂ 9 ರಲ್ಲಿ ಶ್ರೀಮತಿ ಗೌಳೇರ ರುದ್ರಮ್ಮ ಗಂಡ ಲಕ್ಷ್ಮಪ್ಪ, ಶ್ರೀಮತಿ ಗೌಳೇರ ಶಾರದಮ್ಮ ಗಂಡ ಲಕ್ಷ್ಮಪ್ಪ, ಶ್ರೀಮತಿ ಗೌಳೇರ ಈರಮ್ಮ ಗಂಡ ಲಕ್ಷ್ಮಪ್ಪ, ಶ್ರೀಮತಿ ಗೌಳೇರ ಕಸ್ತೂರಮ್ಮ ಗಂಡ ಲಕ್ಷ್ಮಪ್ಪ ಇವರುಗಳ ಹೆಸರುಗಳು ನಮೂದಾಗಿರುವುದು ಕಂಡು ಬರುತ್ತದೆ.

5. ವಿವಾದಾಸ್ಪದ ಜಮೀನಿನ ಒಟ್ಟು ವಿಸ್ತೀರ್ಣ 10.87 ಎಕರೆ ಇದ್ದು ಇದರಲ್ಲಿ ವಿಸ್ತೀರ್ಣ 2.72 ಎಕರೆ ಜಮೀನು ಶ್ರೀಮತಿ ಗೌಳೇರ ರುದ್ರಮ್ಮ ಗಂಡ ಲಕ್ಷ್ಮಪ್ಪ ಇವರು ಮೋತಿಯಾದ ಕಾರಣ ಸದರಿಯವರ ಮಗಳಾದ ಶ್ರೀಮತಿ ಗೌಳೇರ ಲಿಂಗಮ್ಮ ಗಂಡ ನಿಂಗಪ್ಪ ಇವರ ಹೆಸರಿಗೆ ವಾರಸ ಪ್ರಕಾರ ಹಕ್ಕು ಬದಲಾವಣೆಯಾಗಿರುವುದು ಎಂ.ಆರ್.ನಂ. 4/2005-06 ದಿನಾಂಕ 22-02-2006 ರ ಮುಟೇಷನ್ ಪ್ರತಿಯಿಂದ ಕಂಡ ಬರುತ್ತದೆ.

6. ಪ್ರತಿವಾದಿಯು ವಿವಾದಸ್ಪದ ಜಮೀನನ್ನು ನಮ್ಮ ತಾಯಿಯವರು ಮಾರಾಟ ಮಾಡಿ ಕ್ರಯ ಧನ ಪಡೆದು ಕ್ರಯ ನೊಂದಣಿ ಮಾಡ್ಡಿಸಿಕೊಟ್ಟಿರುತ್ತಾರೆ.ಈ ವಿಷಯ ತಿಳಿದು ಕ್ರಯದಾರರ ಹೆಸರಿಗೆ ಖಾತಾ ಬದಲಾವಣೆ ಮಾಡಬಾರದೆಂದು ತಕರಾರು ಹಾಕಿದ್ದೆ. ಆದರೆ ಈಗ ಸದ್ರಿ ತಕರಾರನ್ನು ವಾಪಾಸು ತೆಗೆದುಕೊಳ್ಳುತ್ತಿದ್ದು, ಮುಂದೆ ಸದ್ರಿ ಜಮೀನಿನ ವಿಷಯವಾಗಿ ಆಗಲೀ ಅಥವಾ ಜಮೀನಿನ ಖಾತಾ ಬದಲಾವಣೆ ವಿಷಯವಾಗಲೀ ಯಾವುದೇ ತಕರರುಗಳನ್ನು ಮಾಡುವುದಿಲ್ಲ, ನನ್ನಿಂದಾಲೀ, ನನ್ನ ವಾರಸುದಾರರಿಂದಾಗಲೀ ಏನಾದರೂ ತಂಟೆ-ತಕರಾರುಗಳು ಬಂದಲ್ಲಿ ಅವುಗಳನ್ನು ಸ್ವಂತ ಖರ್ಚಿನಿಂದ ಬಗೆಹರಿಸಿ ಕೊಡುತ್ತೇನೆ. ಸಂಪೂರ್ಣ ಒಪ್ಪಿಗೆಯಿಂದ ಯಾರ ಒತ್ತಾಯಕ್ಕೂ ಒಳಪಡದೆ ತಕರಾರು ಅರ್ಜಿಯನ್ನು ವಾಪಾಸು ತೆಗೆದುಕೊಳ್ಳುತ್ತಿದ್ದೇನೆ ಎಂದು ಪ್ರತಿವಾದಿಯು ಕೋರ್ಟ್ ಅಫಿಡವಿಟ್ ಸಲ್ಲಿಸಿರುತ್ತಾರೆ.

3ನೇ ಪುಟಕ್ಕೆ. . . . .

ವಿವಾದಾಸ್ಪದ ಜಮೀನನ್ನು ಗ್ರಾಮಲೆಕ್ಕಿಗರು ನಮೂನೆ-21 ರಲ್ಲಿ ಇನಾಂ ಜಮೀನು ಎಂದು ದೃಡೀಕರಿಸಿರುವುದರಿಂದ ಮತ್ತು ಡಯಾಗ್ಲಾಟ್ ಪ್ರಕಾರ ಇನಾಂ ಜಮೀನು ಆಗಿರುವುದರಿಂದ ಕರ್ನಾಟಕ ಕೆಲವು ಇನಾಂ ರದ್ದಿಯಾತಿ ಅಧಿನಿಯಮ 1977 ಕಲಂ 11 ರಡಿ ಅಧಿಭೋಗದಾರರ ಹಕ್ಕಿನ ನೋಂದಣಿಗಾಗಿ ನಮೂನೆ-1 ಅರ್ಜಿ ಸಲ್ಲಿಸಿ ನಿಯಮ 5 ರ ಪ್ರಕಾರ ನಮೂನೆ-2 ಪಡೆದುಕೊಂಡಿದ್ದಲ್ಲಿ ದಾಖಲೆಯನ್ನು ಸಲ್ಲಿಸಲು ವಾದಿ ಮತ್ತು ಪ್ರತಿವಾದಿಗೆ ಸೂಚಿಸಿದರು ಸಹ ನಮೂನೆ-2 ಹಾಜರುಪಡಿಸಿರುವುದಿಲ್ಲ.

ಕಾರಣ ಮೇಲಿನ ಎಲ್ಲಾ ಅಂಶಗಳನ್ವಯ ಈ ಕೆಳಕಂಡಂತೆ.

## ಆದೇಶ

ಸಂ/ಕಂ/ನಾಕಮ/ತಕರಾರು/04/20 15-16 ದಿನಾಂಕ 04-04-2016

ಪೀಠಿಕೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ ವಾಸ್ತವಾಂಶ ಮತ್ತು ಕಾರಣಗಳಿಂದ ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿಯ, ತೆಲಗುಬಾಳು ಗ್ರಾಮದ ಸ.ನಂ. 29/3 ವಿಸ್ತೀರ್ಣ 2.72 ಎಕರೆ ಜಮೀನಿಗೆ ಕರ್ನಾಟಕ ಕೆಲವು ಇನಾಂ ರದ್ದಿಯಾತಿ ನಿಯಮ 5 ರ ಪ್ರಕಾರ ನಮೂನೆ-2 ಪಡೆದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲದ ಕಾರಣ ಸದರಿ ಪ್ರಕರಣವನ್ನು ಇನಾಂ ಪ್ರಕರಣವೆಂದು ಪರಿಗಣಿಸಿ ಹಕ್ಕು ಬದಲಾವಣೆ ಪ್ರಕ್ರಿಯೆಯನ್ನು ಕೈ ಬಿಡುತ್ತಾ, ಮೇಲ್ಮನವಿ ಸಲ್ಲಿಸಿಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನಾ ದಿನಾಂಕ 04-04-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ಉಪ ತಹಶೀಲ್ದಾರರು
ಉಪತಹಶೀಲ್ದಾರರು,
ನಾಡ ಕಛೇರಿ, ಮರಿಯಮ್ಮನಹಳ್ಳಿ
ನಾಡಕಛೇರಿ, ಮರಿಯಮ್ಮನಹಳ್ಳಿ

ಗೆ,

ವಾದಿ ಮತ್ತು ಪ್ರತಿವಾದಿಗೆ.

ಪ್ರತಿಯನ್ನು ಭೂಮಿ ಕೇಂದ್ರ, ಹೊಸಪೇಟೆ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.